ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ
ಶಿಕಾರಿಪುರ.

ಸಿಸಿ ನಂ. **342/2024**

| | | |
|---|---|---|
| ಸಾಕ್ಷಿದಾರರ ಹೆಸರು | ಡಾ. ಮಹಂತೇಶ್ | ಪಿಡಬ್ಲ್ಯು- 2 |
| ತಂದೆಯ ಹೆಸರು | ಚಂದ್ರಶೇಖರ್ | ಸಿಡಬ್ಲ್ಯು- 5 |
| ವಯಸ್ಸು | 42 | |
| ಉದ್ಯೋಗ | ವೈದ್ಯರು, | ಪ್ರತಿಜ್ಞೆ ಮೇರೆಗೆ ದಿನಾಂಕಃ |
| ವಾಸ | ಶಿಕಾರಿಪುರ | **14.07.2025** |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆ ಸಸಅ ರವರಿಂದಃ-</u>

1. ನಾನು ಜುಲೈ 2019 ರಿಂದ ಇಲ್ಲಿಯವರೆಗೆ ತಜ್ಞವೈದ್ಯರಾಗಿ ಶಿಕಾರಿಪುರ ತಾಲ್ಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿಃ 11.06.2024 ರಂದು ಸಂಜೆ 6 ಗಂಟೆಯಲ್ಲಿ ನಾನು ಆಸ್ಪತ್ರೆಯಲ್ಲಿ ನನ್ನ ಕರ್ತವ್ಯದಲ್ಲಿದ್ದಾಗ ಶಿಕಾರಿಪುರ ಪಟ್ಟಣ ಪೋಲೀಸ್ ಠಾಣೆಯವರು ರಾಘವೇಂದ್ರ ತಂದೆ ಜಗದೀಶ್ ರವರನ್ನು ಪರೀಕ್ಷೆಗಾಗಿ ಕರೆದುಕೊಂಡು ಬಂದಿದ್ದು, ಅವರನ್ನು ಪರೀಕ್ಷಿಸಲಾಗಿ ಮೂತ್ರ ಪರೀಕ್ಷೆಯಲ್ಲಿ ಮರ್ಜುವಾನ ಟೆಸ್ಟ್ ಪಾಸಿಟಿವ್ ಎಂದು ಬಂದಿರುತ್ತದೆ. ಆ ಬಗ್ಗೆ ನಾನು ವರದಿ ಕೊಟ್ಟಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸದರಿ ವರದಿಯನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಈ ದಿನ ಗೈರು ಹಾಜರಿದ್ದು, ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ.ಸ. ಅಭಿಯೋಜಕರಿಂದಃ

3. ಆ ದಿನ ಆರೋಪಿಯನ್ನು ಕರೆದುಕೊಂಡು ಬಂದಾಗ ಸಮಯ ರಾತ್ರಿ 10 ಗಂಟೆಯಾಗಿತ್ತು ಎಂದರೆ ಸಾಕ್ಷಿ ಸಮಯ ನೆನಪಿಲ್ಲ ಎಂದು ನುಡಿಯುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಜೆ ವಿ ವಕೀಲರಿಂದಃ

4. ನಮ್ಮ ಆಸ್ಪತ್ರೆಯಲ್ಲಿ ಯಾವುದೇ ವ್ಯಕ್ತಿ ಚಿಕಿತ್ಸೆಗೆ ಬಂದಾಗ ಸಮಯ ಮತ್ತು ದಿನಾಂಕಕ್ಕೆ ಅನುಗುಣವಾಗಿ ಕ್ರಮ ಸಂಖ್ಯೆ ಕೊಡುತ್ತೇವೆ ಎಂದರೆ ಸರಿ. ನಿಪಿ - 1 ರಲ್ಲಿ ಸಮಯ ನಮೂದಿಸಿಲ್ಲ ಎಂದರೆ ಸರಿ. ಆ ಕಾರಣದಿಂದ ನಾನು ಪೋಲೀಸರ ಮನವಿಗೆ ಸುಳ್ಳು ಪ್ರಮಾಣ ಪತ್ರ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ - 1 ರಲ್ಲಿ ಮರಿಜುವಾನ ಟೆಸ್ಟ್ ಯಾವ ಪದ್ದತಿಯಲ್ಲಿ ಮಾಡಿದ್ದೇವೆ ಎಂದು ನಮೂದಿಸಿಲ್ಲ ಎಂದರೆ ಸರಿ. ಮರಿಜುವಾನ ಟೆಸ್ಟ್ ನ್ನು ಯೂರಿನ್ ಸ್ಯಾಂಪಲ್ ನಲ್ಲಿ ನ್ಯಾನೋಗ್ರಾಂ ಪರ್ ಎಂ ಎಲ್ ನ ರೀತಿ ಮಾಡುತ್ತೇವೆ. ನಾನು ಕೊಟ್ಟಿರುವ ವರದಿಯಲ್ಲಿ ಎಷ್ಟು ನ್ಯಾನೋಗ್ರಾಂ ಮತ್ತು ಎಷ್ಟು ಎಂ ಎಲ್ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿ ನಮ್ಮ ಆಸ್ಪತ್ರೆಯಲ್ಲಿ ಆ ಸೌಲಭ್ಯ ಇಲ್ಲ ಎಂದು ನುಡಿಯುತ್ತಾರೆ. ಆ ಕಾರಣದಿಂದ ನಾನು ಸುಳ್ಳು ಪ್ರಮಾಣ ಪತ್ರ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲೀಸರ ಮನವಿ ಮೇರೆಗೆ ಸುಳ್ಳು ಪ್ರಮಾಣ ಪತ್ರ ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇದೆ.

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶಿಕಾರಿಪುರ.